ಶಾಸ್ತ್ರಿಗಳು ಒಂದುಕ್ಷಣ ದಂಗಾದಂತೆ ಕಂಡರು. ತಮ್ಮ ಕುರ್ಚಿಯಿಂದ ಕೆಳಗಿಳಿದು ನೇರವಾಗಿ ಸಂಜಯನ ಪಕ್ಕ ಬಂದು ನಿಂತು ನೋಡತೊಡಗಿದರು.

'ನೀನು ನಮ್ಮ ಅನಂತುವಿನ ಮಗನೇ? ಅನಂತು ನಮ್ಮವನು, ನನಗಿಂತ ಪ್ರಾಯದಲ್ಲಿ ಸಣ್ಣವ. ಊರು ಬಿಟ್ಟು ಅಮೆರಿಕಕ್ಕೆ ಹೋಗಿದ್ದ. ಅಮೆರಿಕದಲ್ಲಿ ತೀರಿಹೋದ ಅಂತನೂ ಕೇಳಿದೆ' ಅಂದರು.

ಸಂಜಯನಿಗೆ ಏನು ಹೇಳ್ಬೇಕು ಅಂತ ಗೊತ್ತಾಗ್ಲಿಲ್ಲ. ಶಾಸ್ತ್ರಿಗಳ ಮುಖ ನೋಡಿ ಸಣ್ಣ ಮುಖ ಮಾಡಿಕೊಂಡು 'ಹೌದು, ಅಪ್ಪ ಟೆಕ್ಸಾಸ್‌ನ ಶೂಟಿಂಗ್‌ನಲ್ಲಿ ತೀರಿ ಹೋದರು' ಅಂತ ಹೇಳಿದ.

'ಓ ದೇವರೇ' ಎಂದ ಶಾಸ್ತ್ರಿಗಳು ಸ್ವಲ್ಪ ಹೊತ್ತು ಆಕಡೆ ಈಕಡೆ ನೋಡಿ ತಲೆ ಕೆಳಗೆ ಹಾಕಿ ಚಾವಡಿಯಲ್ಲಿ ಆಚೆ ನಡೆದಾಡಿದರು.

ನಂತರ ಅವರಷ್ಟಕ್ಕೇ 'ಈ ಊರಿಂದ ಅಮೆರಿಕಕ್ಕೆ ಹೋದವರಿಗೆಲ್ಲ ಹೀಗೇ ಆಗ್ತದೆ ಎಂದು ಕಾಣ್ತದೆ. ನೋಡು ನನ್ನ ಮಗ ಮತ್ತೆ ಸೊಸೆ ಒಂದೇದಿನ 2002ರಲ್ಲಿ ಆ ನ್ಯೂಯಾರ್ಕ್‌ನ ದೊಡ್ಡ ಬಿಲ್ಡಿಂಗ್ನಲ್ಲಿ...' ಹೇಳುತ್ತಾ ಗದ್ಗದಿತರಾದರು.

ಸಂಜಯನಿಗೆ ಏನು ಹೇಳಬೇಕು ಅಂತ ಗೊತ್ತಾಗಲಿಲ್ಲ.

ಒಂದೆರಡು ನಿಮಿಷ ಆಲೋಚಿಸುತ್ತಿದ್ದ ಶಾಸ್ತ್ರಿಗಳು ಗಂಟಲು ಸರಿಮಾಡಿ ಕೊಂಡು 'ಸೀತಾ... ಇಲ್ಲಿ ಬಾ' ಅಂತ ಹೆಂಡತಿಯನ್ನು ಕರೆದರು.

ಸೀತಮ್ಮ ಅಡುಗೆ ಮನೆಯಿಂದ ಕೈ ಒರೆಸಿಕೊಂಡು ಬಂದು 'ಏನ್ರೀ' ಅಂದರು.

'ನೋಡು, ನಾನು ಕೃಷ್ಣ ಕಾರಂತರ ಮಗ ಅನಂತುವ ಬಗೆಗೆ ಹೇಳ್ತಿದ್ದೆ ನೋಡು... ಆ ಅನಂತುವ ಮಗ ಬಂದಿದ್ದಾನೆ ಇಲ್ಲಿ' ಎನ್ನುತ್ತಾ ಸಂಜಯನ ಕಡೆಗೆ ಕೈ ತೋರಿಸಿದರು. ಅದೇ ವೇಳೆಗೆ ಶಾಸ್ತ್ರಿಗಳ ಮೊಮ್ಮಗಳು ಆಶಾ ಹೊರಬಂದು ಅಜ್ಜಿಯ ಪಕ್ಕ ನಿಂತಳು.

'ಏನಪ್ಪಾ ನಿನ್ನ ಹೆಸರು?' ಸೀತಮ್ಮ ಕಣ್ಣಲ್ಲಿ ಪ್ರೀತಿ ತುಂಬಿಕೊಂಡು ಕೇಳಿದರು.

'ಸಂಜಯ್' ಹೇಳಿದ.

'ಇದೇ ಮೊದಲ ಬಾರಿಗೆ ಸೀತಾಪುರಕ್ಕೆ ಬಂದಿಯೇನು?' ಸೀತಮ್ಮ ಕೇಳಿದರು.

'ಹೌದಮ್ಮ, ನಾನು ಅಮೆರಿಕದಲ್ಲೇ ಹುಟ್ಟಿ ಬೆಳೆದದ್ದು. ಆದ್ರೆ ಸಣ್ಣದಿರುವಾಗ ಪ್ರತೀ ರಾತ್ರೆ ಮಲಗುವಾಗ ಅಪ್ಪ ಸೀತಾಪುರದ ಕಥೆ ಹೇಳುವವರು. ಹಾಗಾಗಿ ಸೀತಾಪುರ ಗೊತ್ತಿದೆ. ನನ್ನ ಕಣ್ಣಲ್ಲಿ ಮೊದಲಬಾರಿಗೆ ನೋಡ್ತಾ ಇದ್ದೀನಷ್ಟೆ' ಅಂದ.

'ನಿನ್ನಪ್ಪ ಬಾರೀ ಒಳ್ಳೆಯವರು ಮಗಾs. ನಿನ್ನ ಅಜ್ಜ ಕೂಡ. ಏನು ಮಾಡುವುದು, ಅವರವರ ಹಣೆಬರಹ. ನೋಡು ಇಲ್ಲದಿದ್ದರೆ ನಮ್ಮ ಆಶಾಳನ್ನು ನೋಡು. ಇವಳೂ ನಿನ್ನ ತರಹ ಅಮೆರಿಕದಲ್ಲೇ ಹುಟ್ಟಿದವಳು. ಅವಳು ಸಣ್ಣ ಮಗು ಇರುವಾಗ ಅಪ್ಪ ಅಮ್ಮನನ್ನು ಕಳ್ಕೊಂಡು ಸೀತಾಪುರಕ್ಕೆ ಬರುವ ಹಾಗೆ ಆಯ್ತು. ಈಗ ನೋಡು, ಅಮೆರಿಕದ ಕಾಲೇಜುಗಳಲ್ಲಿ ಡಿಗ್ರಿ ಮಾಡಿಕೊಂಡಿರ ಬೇಕಾದವಳು ಈಗ ನಮ್ಮೊಟ್ಟಿಗೆ ಇಲ್ಲಿ ಹಳ್ಳಿಯಲ್ಲಿ ಇದ್ದಾಳೆ. ಸೆಕೆಂಡ್ ಪಿ.ಯು. ಸಿ.ಯವರೆಗೆ ಇಲ್ಲೇ ಸವಣೂರಿನ ಕಾಲೇಜಿಗೆ ಹೋದ್ಲು. ಇನ್ನು ಮುಂದೆ ಕಾರ್ಕಳಕ್ಕೆ ಹೋಗ್ಬೇಕು ನೋಡು, ಸೀತಾಪುರದಿಂದ ಬಂದು ಹೋಗ್ಲಿಕ್ಕೆ ಸಾಧ್ಯ ಇಲ್ಲ' ಎನ್ನುತ್ತಾ ತಮ್ಮ ಕಷ್ಟ ಹೇಳಿಕೊಂಡು ಕಣ್ಣಂಚನ್ನು ಸೆರಗಿನಿಂದ ಒರೆಸಿದರು.

ಆಶಾಳಿಗೆ ಇದು ಒಳ್ಳೆಯದಾಗಿ ಕಾಣಲಿಲ್ಲ. ಅಜ್ಜಿಯನ್ನು ಅಪ್ಪಿ ಹಿಡಿದು 'ಹಳೆ ಕಥೆಯೆಲ್ಲ ಯಾಕೆ ಅಜ್ಜೀ' ಅಂದಳು.

ಸಂಜಯ್ ಪರಿಚಯವಾಗಿ ಇನ್ನೂ 510 ನಿಮಿಷವಾಗಿರಲಿಲ್ಲ. ಸೀತಮ್ಮ ತಮ್ಮ ಮಗನ ಹಾಗೂ ಮೊಮ್ಮಗಳ ವಿಷಯ ಅವನ ಹತ್ತಿರ ಹೇಳುತ್ತಾ ಎಷ್ಟೋ ವರ್ಷದ ಪರಿಚಯಸ್ಥನ ಹಾಗೆ ಮಾತನಾಡುತ್ತಿದ್ದರು. ಸಂಜಯನಿಗೆ ಇದು ವಿಶೇಷವಾಗಿ ಕಂಡಿತು. ಸೀತಾಪುರಕ್ಕೆ ದಾರಿ ಹೇಳಿದ ಶೆಣೈ ಮಾಮ, ತಮ್ಮ ಹೆಂಡತಿಯನ್ನು ಅಪರಿಚಿತನ ಜೊತೆಗೆ ಸೀತಾಪುರಕ್ಕೆ ಕಳುಹಿಸಿದ ಪೊರ್ಬುಗಳು, ತಮ್ಮ ಮಗನ ಹಾಗೂ ಮೊಮ್ಮಗಳ ವಿಷಯ ಮಾತನಾಡುತ್ತಿರುವ ಸೀತಮ್ಮ ಇವರೆಲ್ಲರಿಗೂ ಸಂಜಯನ ಬಗ್ಗೆ ಯಾವುದೇ ಸಂಶಯವೂ ಸಂಕೋಚವೂ ಇರಲಿಲ್ಲ. ಸಂಜಯ್ ಭಾರತದ ಬಗ್ಗೆ ಬಹಳಷ್ಟು ಓದಿದ್ದ, ಆದರೆ ಹೀಗೆ ತನ್ನನ್ನು ಇಷ್ಟು ಸುಲಭವಾಗಿ ತಮ್ಮವನಾಗಿಸುತ್ತಿರುವುದು ಕಂಡು ಆಶ್ಚರ್ಯಪಟ್ಟ.

ಇವರ ಸಂಭಾಷಣೆ ನಿಲ್ಲಿಸಿದ ಶಾಸ್ತ್ರಿಗಳು 'ಅಲ್ಲ ಸಂಜಯ್, ನೀನು ಹೀಗೆ ಒಮ್ಮೆಗೇ ಸೀತಾಪುರಕ್ಕೆ ಯಾಕೆ ಬಂದೆ? ನೋಡಬೇಕು ಅನ್ನಿಸಿತೇನು?' ಎಂದರು.

ಅದಕ್ಕೆ ಸಂಜಯ್ ತಾನು ಬಂದ ಕಾರಣ ಹೇಳಲು ಶುರು ಮಾಡಿದ.

'ನನಗೆ ಒಂದು ಚರ್ಮ ರೋಗ ಇದೆ. ಅದಕ್ಕೆ **Harpes Zoster** ಅಂತ ಅಮೆರಿಕದಲ್ಲಿ ಹೇಳ್ತಾರೆ. ಇದು ಒಂದು ವೈರಸ್‌ನಿಂದ ಬರುವ ಚರ್ಮ ರೋಗ. ನನ್ನ ಕುತ್ತಿಗೆಯ ಸುತ್ತ ಗುಳ್ಳೆಗಳ ಹಾಗೆ ಬಂದಿದೆ. ಅದು ದಿನೇದಿನೇ ಮುಂದುವರಿಯುತ್ತಿದೆ. ನಾನು ಇದಕ್ಕೆ ಅಮೆರಿಕದಲ್ಲಿ ಔಷಧಿ ಮಾಡಿದೆ. ಒಮ್ಮೆ ಗುಣ ಆಯ್ತು. ವೈದ್ಯಕೀಯ ವಿಜ್ಞಾನ ಪ್ರಕಾರ ಇದು ಮತ್ತೊಮ್ಮೆ ಬರುವುದಿಲ್ಲ. ಆದರೆ ಏನೋ ವಿಶೇಷ, ನನಗೆ ಇದು ಮೂರನೇ ಬಾರಿ. ಔಷಧ ಮಾಡಿದಾಗ ಅದು ಗುಣ ಆಗುತ್ತದೆ. ಅಲ್ಲಿಯ ಡಾಕ್ಟರ್‌ಗಳಲ್ಲಿ ಹೋದರೆ ಅವರು ಕಾಯಿಲೆಗೆ ಮದ್ದು ಕೊಡುತ್ತಾರೆಯೇ ಹೊರತು ಸಂಪೂರ್ಣ ಗುಣ ಮಾಡುವುದಿಲ್ಲ. ಕೊನೆಗೆ ನನ್ನ ಭಾರತೀಯ ಮಿತ್ರರಲ್ಲಿ ಹೇಳಿದಾಗ ಅವರು ಆಯುರ್ವೇದ ಔಷಧ ಮಾಡು ಅಂದರು. ಆಗ ನನಗೆ ಸೀತಾಪುರದ ನೆನಪಾಯಿತು. ನನ್ನಪ್ಪ ಸೀತಾಪುರದ ಬಗ್ಗೆ ಬಹಳ ಹೇಳಿದ್ದರು. ನಿಮ್ಮ ಬಗ್ಗೆ ಮತ್ತು ನಿಮ್ಮ ಔಷಧಗಳ ಬಗ್ಗೆ ಅಪ್ಪನಿಂದ ಕೇಳಿದ್ದೆ. ಹಾಗಾಗಿ ಸೀತಾಪುರಕ್ಕೆ ಬಂದು ನಿಮ್ಮಿಂದ ಔಷಧ ತೆಕೊಂಡು ಈ ಕಾಯಿಲೆಯನ್ನು ಸಂಪೂರ್ಣ ಗುಣಮಾಡಿಕೊಂಡು ಹೋಗ್ಬೇಕು ಅಂತ ಬಂದೆ. ಜೊತೆಗೆ ಅಪ್ಪನ ಸೀತಾಪುರವನ್ನು ಒಮ್ಮೆ ನೋಡಿದ ಹಾಗೂ ಆಗುತ್ತದೆ ಅಂದುಕೊಂಡೆ. ಇಲ್ಲಿ ಬರುತ್ತಾ ಇದ್ದಂತೆ ಅಪ್ಪನ ನೆನಪು ಬಹಳ ಆಗ್ತಾ ಇದೆ' ಅಂದ ಸಂಜಯ್.

ಶಾಸ್ತ್ರಿಗಳು ಸಂಜಯನ ಕಣ್ಣಲ್ಲಿ ಅನಂತುವನ್ನು ನೋಡಿದರು. ಶಾಸ್ತ್ರಿಗಳ ಸ್ವರ ಭಾರವಾಯಿತು. ಆದರೂ ಅದನ್ನು ತೋರಿಸಿಕೊಡದೆ,

'ಎಲ್ಲಿ, ತೋರಿಸು ನೋಡುವ' ಅಂದರು.

ಸಂಜಯನಿಗೆ ಸೀತಮ್ಮನ ಹಾಗೂ ಆಶಾಳ ಎದುರು ಅಂಗಿ ತೆಗೆಯಲು ಮುಜುಗರ. ಆದರೂ ಸಂಕೋಚದಲ್ಲೇ ಅಂಗಿ ತೆಗೆದ. ಶಾಸ್ತ್ರಿಗಳು ಅವನ ಕುತ್ತಿಗೆ ಹತ್ತಿರ ಇದ್ದ ಹುಣ್ಣುಗಳನ್ನು ನೋಡಿ 'ಓ ಇದಾ, ಇದು ಸರ್ಪಸುತ್ತು. ಯಾವ ವೈರಸ್ ಗೈರಸ್ ಅಲ್ಲ' ಎನ್ನುತ್ತಾ 'ಇದು ದೊಡ್ಡ ಕಾಯಿಲೆ ಅಲ್ಲ. ಮೊದಲಿಗೆ ಸ್ನಾನ ಮಾಡಿ ಊಟ ಮಾಡು. ಬಹಳ ದೂರದಿಂದ ಬಂದಿದ್ದೀಯಲ್ಲ' ಅಂದರು.

ಅಲ್ಲೇ ಇದ್ದ ಆಶಾಳ ಕಡೆಗೆ ತಿರುಗಿ 'ಆಶಾ, ಇವನಿಗೆ ಸ್ನಾನದ ಮನೆ ತೋರಿಸಮ್ಮಾ' ಅಂದರು.

ಸಂಜಯನಿಗೆ ಗಾಬರಿ ಆಯಿತು. 'ಶಾಸ್ತ್ರಿಗಳೇ, ನಾನು ಔಷಧ ತೆಕೊಂಡು ಹಿಂದೆ ಹೋಗುವ ಆಲೋಚನೆ ಮಾಡಿ ಬಂದಿದ್ದೆ' ಎಂದ.

ಸೀತಮ್ಮ 'ಎಲ್ಲಿಗೆ? ನೀನು ಈಗಷ್ಟೇ ಬಂದಿದ್ದಿ. ಇದು ನಿನ್ನ ಊರು. ಹೇಗೆ ಅಷ್ಟು ಬೇಗ ಹಿಂದೆ ಹೊಗುತ್ತೀ? ಮೊದಲಿಗೆ ಶಾಸ್ತ್ರಿಗಳು ಹೇಳಿದ ಹಾಗೆ ಸ್ನಾನ ಮಾಡಿ ಊಟ ಮಾಡು' ಅನ್ನುತ್ತಾ ಸಂಜಯನ ಮೇಲೆ ಅಧಿಕಾರ ತೋರಿಸಿದರು.

ಆಶಾ 'ಬನ್ನಿ ಸ್ನಾನದ ಮನೆ ತೋರಿಸ್ತೇನೆ' ಅಂದಳು. ಸಂಜಯ್ ಒಮ್ಮೆ ಶಾಸ್ತ್ರಿಗಳ ಮುಖ ನೋಡಿದ. 'ಸ್ನಾನ ಮಾಡಿ ಊಟ ಮಾಡು, ಆಮೇಲೆ ನೋಡೋಣ' ಅಂದರು ಶಾಸ್ತ್ರಿಗಳು.

ಸಂಜಯ್ ಮನಸಿಲ್ಲದ ಮನಸ್ಸಿನಿಂದ ಮನೆಯ ಒಳಗೆ ಹೋದ. ಸಂಜಯ್ ಒಳ ಹೋದವನೇ ಮೇರಿ ಊಟ ಮಾಡಿಕೊಂಡಿದ್ದನ್ನು ನೋಡಿದ.

ಸೀತಮ್ಮ 'ಮೇರಿ, ಇದು ನಮ್ಮ ಅನಂತು ಕಾರಂತರ ಮಗ. ಕೃಷ್ಣ ಕಾರಂತರ ಮೊಮ್ಮಗ' ಅಂದರು.

ಮೇರಿ ಸಂಜಯನನ್ನೇ ನೋಡಿ 'ನೀವು ನನಗೆ ಹೇಳಲೇ ಇಲ್ಲ, ಬಹಳ ಸಂತೋಷ ಆಯ್ತು' ಅಂದಳು.

ಸಂಜಯ್ ಈ ಊರಲ್ಲಿ ಎಲ್ಲರಿಗೂ ನನ್ನ ಪರಿಚಯ ಇದ್ದ ಹಾಗೆ ಕಾಣ್ತದೆ ಅಂದುಕೊಂಡ.

ಸಂಜಯ್ ಬೇಗಬೇಗನೇ ಸ್ನಾನಮಾಡಿ ಬಟ್ಟೆ ಬದಲಿಸಿ ಬಂದ. ಶಾಸ್ತ್ರಿಗಳ ಕೈಯಲ್ಲಿ ಒಂದು ಮಂತ್ರಿಸಿದ ಬೈಹುಲ್ಲು ಇತ್ತು. ಸಂಜಯನ ಕುತ್ತಿಗೆಯ ಸುತ್ತ ಸರ ಹಾಕಿದ ರೀತಿಯಲ್ಲಿ ಬೈಹುಲ್ಲಿನ ಸರವನ್ನು ಅವರು ತೊಡಿಸಿದರು. ನಂತರ ಸಂಜಯ್ ಕೈಯಲ್ಲಿ ಕೆಲವು ಬೇರುಗಳನ್ನೂ ಮಂತ್ರಿಸಿದ ನೀರನ್ನೂ ಕೊಟ್ಟು ಈ ಬೇರುಗಳನ್ನು ಈ ನೀರಿನಲ್ಲಿ ತೇದಿ ನಿನ್ನ ಕುತ್ತಿಗೆಯ ಸುತ್ತ ಹುಣ್ಣಿನ ಮೇಲೆ ಹಚ್ಚು ಅಂತ ಹೇಳಿದರು.

ಸಂಜಯನಿಗೆ ಕುತ್ತಿಗೆಯ ಸುತ್ತ ಹಾಕಿದ ಹುಲ್ಲ ಸರ ವಿಚಿತ್ರ ಕಾಣತೊಡಗಿತು. ಈ ತರಹದ ಸಂಪ್ರದಾಯ ಅವನು ಈ ಹಿಂದೆ ಆಫ್ರಿಕಾದಲ್ಲಿ ಕೇಳಿದ್ದ ಹಾಗೂ ನೋಡಿದ್ದ. ತನ್ನ